ಬಡಬಡ ಒದ್ದಾಡಿ ಬಿದ್ದು ಸತ್ತ ಮೇಲೆ ಆ ದೇವರನ್ನ ಅಲ್ಲೆ ಬಿಸಾಡಿದ್ದ. ಹೋದ ಮಳೆಗಾಲದ ಕಾರ್ ತಿಂಗಳ ಮಳೆಯ ಟೈಮಿಗೆ ಅದ್ಯಾವ ದೇವರ ಉಪದ್ರವೋ ಅದ್ಯೆಂತಾ ಜ್ವರವೋ ಈಸೂರನ ಮಗಳು ಬಚ್ಚಿ ಸಮೇತ ಆ ನಾಕೈದು ಬಿಡಾರವನ್ನೇ ಪಡ್ಚ ಮಾಡಿಬಿಟ್ಟಿತ್ತು. ಈಗ ಆ ಮೂರು ಬಿಡಾರಕ್ಕೆ ಏಳು ಜನ ಉಳಿದಿದ್ದರು. ಈಸೂರ ಅವನ ಹೆಣ್ತಿ ಚಣ್ಣು ಮಗ ಬೇಡು. ಚಣ್ಣು ತಂಗಿ ಕರ್ಚು ಅವಳ ಗಂಡ ಸ್ಯಾಸ. ಈಸೂರನ ತಂಗಿ ಪಾರೋತಿ ಅವಳ ಗಂಡ ಬಚ್ಚ.

* * *

ಬೇಡು ಚುರ್ಕಿನ ಹುಡ್ಗ. ಹತ್ತೊ ಹನ್ನೆರಡೋ ಮಳೆಗಾಲ ಕಂಡಿದ್ದ ಬೇಡುಗೆ ಮರ ಹತ್ತುವುದು ಮತ್ತು ಹಳುವಿಗೆ ಕಲ್ಲು ಕುಟ್ಟುವುದು ಅಂದ್ರೆ ಭಾರೀ ಕುಶಿ. ಕಳೆದ ಮಳೆಗಾಲದ ಸುರುವಿಗೆ ಅಕ್ಕ ಮತ್ತೆ ದೋಸ್ತಿ ಮಕ್ಕಳೆಲ್ಲ ಕಣ್ಣ ಮುಂದೆ ಬಡಬಡ ಹೊಡ್ಕಿ ಹೆಣವಾಗಿದ್ದನ್ನ ಕಂಡ ಮೇಲೆ ಅಂವ ಅಪ್ಪಯ್ಯ ಅಬ್ಬಿಯ ಬಾಲ ಬಿಟ್ಟು ತಿರ್ಗಿದ್ದೇ ಇಲ್ಲ. ಮತ್ತೆ ಆಸಾಡಿ ಮಳೆ ಬೇಡುವನ್ನ ಒಂದು ವರ್ಷ ದೊಡ್ಡವನಾಗಿ ಮಾಡಿದ್ದರೂ ಅವನಿಗೆ ಹೆದರಿಕೆ ಮಾತ್ರ ಹೋಗಿಲ್ಲ.

ಗೊರ್ಬು ಹಾಕೊಂಡು ಹೊರಟ ಅಪ್ಪಯ್ಯನ ಕಂಡು 'ನಾನೂ ಬತ್ತೆ' ಎಂದು ಹಿಂದೆಯೇ ಹೊರಟ. ಗುಡುಗಿಗೆ ಹುಟ್ಟಿದ ಕಲ್ಲಣಬೆಯನ್ನ ಅರಸುತ್ತಾ ಅಪ್ಪ ಮಗ ಹಾಡಿಯ ತುಂಬಾ ತಿರುಗಾಡಿ ಆ ಬಾಗಾಳ ಮರದ ಬುಡಕ್ಕೆ ಬಂದು ನಿಂತರು. ಆ ಹುಡ್ಗ ಬೇಡು ರಪರಪ ಮರ ಹತ್ತಿ ಬಿಟ್ಟ. ಈಸೂರನಿಗೆ ಹೆದರಿಕೆ. 'ಮಗಾ ಮಳಿ ಬಂದ್ ಮರ ಜಾರತ್. ನೀ ಎಂತಕೆ ಹತ್ತದೆ? ಹಗೂರ ಇಳಿ' ಅಂತ ಮಗನನ್ನೇ ಕಾಂತ ನಿಂತ. ಮಳೆಯ ಹುಂಡು ಮುಖದ ಮೇಲೆ ಹೊಡೆಯುತ್ತಿದ್ದವು. 'ಬೇಗ ಇಳಿಯಾ' ಕೂಗಿದ. ಬೇಡು ಮಾತ್ರ ಅಪ್ಪನ ಕಡೆ ಕಾಣ್ಲಿಲ್ಲ. ಆ ಹಾಡಿಯ ಆಚೆಗೆ ಗುಡ್ಡೆಯ ಎದೆ ಬಗೆದು ಗಾಯ ಮಾಡಿದ್ದರು. ಆ ಗಾಯದ ಮೇಲೆ ಮಳೆ ಹೊಯ್ದು ರಕ್ತ ಸುರಿವಂತೆ ನೀರು ಹರಿತಿತ್ತು. 'ಅಪ್ಪಯ್ಯ ಗುಡ್ಡೆಗೆ ಗಾಯ ಆಯಿ ರಕ್ತ ಬತ್ತಿತ್ತು' ಅಂತ ಕೂಗಿದ. 'ನೀ ಅವ್ನಿದಿ ಹಾಕೂದ್ ಬ್ಯಾಡ. ಇಳಿ' ಅಂತ ಅಪ್ಪ ಕರೆದ. ಬೇಡು ಮರ ಇಳಿವ ಹೊತ್ತಿಗೆ ಚಂಡಿ ಗೊಬ್ಬರ ಆಗಿದ್ದ. ಸಿಕ್ಕಿದ ಒಂದು ಮುಷ್ಟಿ ಅಣಬೆಯನ್ನ ಚಣ್ಣು ಚಂದ ಪರಾತ ಮಾಡಿ ಮೂರು ಜನ ಉಂಡರು. ನಾಳೆ ಊರೊಳಗೆ ಆಸಾಡಿ ಹಬ್ಬದ ಊಟ ಬೇಡುವುದಕ್ಕೆ ಹೋಗುವ ಅಂತ ಚಣ್ಣು, ಕರ್ಚು, ಪಾರೋತಿ ಮಾತಾಡಿಕೊಂಡದ್ದು ಬೇಡು ಕೇಂಡ. ತಾನೂ ಊರಿಗೆ ಹೋಗಿ ಬರಬೇಕು. ನಾಳಿಗೆ ಅಬ್ಬಿಯ ಒಟ್ಟಿಗೆ ಹ್ವಾತೆ ಅಂತ ಚಣ್ಣುವಿನ ಸೆರಗೊಳಗೆ ಹೊಕ್ಕಂಡು ಮನಿಕಂಡ.

ಜಡಿಮಳೆಗೆ ವಝುರು ಏಳುವ ಆ ಹಾಡಿಯ ಮಣ್ಣಿನ ಮೇಲೆ ತಳಗಟ್ಟು ಮಾಡಿದ್ದ ಈಸೂರ ಬೊಡ್ರಸ್ ಕಲ್ಲು ತಂದು ಜಪ್ಪಿ ಅದರ ಮೇಲೆ ಹುತ್ತದ ಬುಡದ ನೈಸ್ ಮಣ್ಣ ಗಿಲಾವ್ ಮಾಡಿದ್ದ. ಅದರ ಮೇಲೆ ಚಣ್ಣು ಉರುಟು ಕಲ್ಲು ಹಿಡ್ಕೊಂಡು ತಿಕ್ಕಿ ತಿಕ್ಕಿ ಸಾಫ್ ಮಾಡಿ ಸೆಗಣಿ ನೀರು ಹಾಕಿ ಸಾರಿಸಿದ ಅವರ ಬಿಡಾರದ ನೆಲ ಹೊರಗೆ ಸುರಿವ ಮಳೆಗೆ ಬೆವರು ಬಂದಂಗೆ ಬೆತ್ತುತ್ತಿತ್ತು. ಈಸೂರನ ಪರಿವಾರ ಅದಕ್ಕಿಂತ ಚೆಂದದ ನೆಲದ ಮೇಲೆ ನಡೆದಾಡಿದ್ದೂ ಇಲ್ಲ. ಆ ತಳಗಟ್ಟು ಹೆಚ್ಚೆಂದರೆ ಹತ್ತೂ ಹನ್ನೆರಡು ಅಡಿಯ ಸುತ್ತಳತೆಯದ್ದಿರಬಹುದು. ನಾಕು ಮೂಲೆಯ ಬೋಗಿ ಮರದ ಕಂಬಗಳೇ ಆ ಬಿಡಾರದ ಆಧಾರ. ಸಾಧಾರಣ ಗಾಳಿಗೂ ಗಾಳಿಪಟ ಆಗಬಹುದಾದ ಆ ಬಿಡಾರವನ್ನು ಗಾಳಿ ತಾಂಗದಂತೆ ಕಾಯುತ್ತಿರುವುದು ಹಾಡಿಯ ಬೋಗಿ, ಕುಂಟು ನೇರ್ಲು, ಚೂರಿ ಮುಳ್ಳಿನ ಹಳುಗಳು. ಇಲ್ಲದಿದ್ದರೆ ಮಾರಸ್ವಾಮಿ ಕಡೆಯಿಂದ ಬೀಸುವ ಕಡಲಿನ ಗಾಳಿಗೆ ಆ ಮೂರು ಕುಟುಂಬ ಬಿಡಾರದ ಸಮೇತ ಹಾರಿಕೊಂಡು ಎಲ್ಲೋ ಮೂಡಾಯ್ ದಿಕ್ಕಿನ ಊರಲ್ಲೋ ಗೆದ್ದೆಯಲ್ಲೋ ಬಿದ್ದಿರುತ್ತಿದ್ವೇನೋ!

ಮುಂಡಕನ ಓಲೆಯ ಹಸೆ ನೇಯುವುದನ್ನು ಕಲಿತಿದ್ದಳು ಚಣ್ಣು. 'ಓಲೆ ತಕ ಬಾ ನಾ ಹಸೆ ನೇಯ್ತೆ' ಅಂದ ಹೆಣ್ತಿ ಮಾತು ಕೇಂಡ ಈಸೂರ ಬೆಟ್ಟಕೆರೆಯಲ್ಲಿ ಬೆಳೆದಿದ್ದ ಓಲೆ ಕಡಿಯಲು ಹೋದಾಗ ಕೆರೆ ಮುಟ್ಟಿದ್ಯಾ ಅಂದ್ಕಂಡು ಅಲ್ಲಿನ ಜನ ಅವನ ಮೈ ಮುಟ್ಟ ಹೊಡೆದರೆ ಮೈಲಿಗೆ ಆಗ್ತದೆ ಅಂತ ದೂರ ನಿಂತು ಕಲ್ಲು ಹೊಡೆದು ಓಡಿಸಿದ್ದರು. ಈಸೂರನಿಗೆ ಅಂದು ಬಿದ್ದ ಪೆಟ್ಟಿಗೆ ಅವನು ಬದುಕಿದ್ದೇ ಹೆಚ್ಚು. ಆಮೇಲೆ ಚಣ್ಣು ಓಲೆ ತಂದುಕೊಡಿ ಎಂದು ಕೇಳಲಿಲ್ಲ. ಬೇಡಿಕೊಂಡು ಬಂದ ಗೋಣಿ ಚೀಲವೇ ಅವರ ಹಸೆಯಾಗಿತ್ತು. ಗೋಣಿ ಚೀಲದ ಮೇಲೆ ಮಲಗುವುದು ಹೊದ್ದುಕೊಳ್ಳುವುದು ಹೀಗೆ. ಆದರೆ ಮಳೆಗಾಲ ಮಾತ್ರ ಆ ನೆಲವನ್ನು, ಗೋಣಿ ಚೀಲವನ್ನೂ ಚಂಡಿ ಮಾಡಿ ಮೈಯನ್ನು ಮರಗಟ್ಟಿಸುತ್ತಿತ್ತು.